MR. SPEAKER—Papers laid.

ಮನವಿಗಳು

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಹಿಂದೆ ಹೌಸ್ ಸರ್ಜನ್ ಕೋರ್ಸ್ ಮಾಡತಕ್ಕವರಿಗೆ ತಿಂಗಳಿಗೆ ಸ್ಟೈಪೆಂಡ್ 400 ರೂಪಾಯಿ ಕೊಡುತ್ತಿದ್ದರು. ಈ ಸರ್ಕಾರ ಬಂದ ಮೇಲೆ ನಿಲ್ಲಿಸಲಾಗಿದೆ. ಅವರಿಗೆ ಸ್ಟೈಪೆಂಡ್ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಂಡಿದ್ದೆ, ಅದರ ಬಗ್ಗೆ ಉತ್ತರ ನಾಳೆ ಹೇಳಲಾಗುವುದೆಂದು ಹೇಳಿದ್ದೀರಿ. ಈಗ ಅವರು ಧರಣಿ ಮಾಡುತ್ತಿದ್ದಾರೆ, ರೋಗಿಗಳಿಗೆ ತೊಂದರೆಯಾಗುತ್ತಿದೆ. ಹೌಸ್ ಸರ್ಜನ್ ಮಾಡತಕ್ಕವರಿಗೆ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಅಂಗೀಕರಿಸಿದ್ದೇನೆ. ನಾಳೆ ಅಥವಾ ನಾಡಿದ್ದು ಬರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನಿಯಮ 334ರ ಕೆಳಗೆ ವಿಷಯವನ್ನು ಎತ್ತಿದ್ದೇವೆ. ಅವರು ಧರಣಿ ಕುಳಿತಿದ್ದಾರೆ, ಹೌಸ್ ಸರ್ಜನ್ ಮಾಡತಕ್ಕ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ; ಉತ್ತರ ಕೊಡದಿದ್ದರೆ ಹೇಗೆ? ಇದು ನ್ಯಾಯವಲ್ಲ.

ಅಧ್ಯಕ್ಷರು.—ಕೊಟ್ಟಂತಹ ನೋಟೀಸನ್ನು ಗಮನ ಸೆಳೆಯುವ ಸೂಚನೆಗೆ ಕನ್‌ವರ್ಟ್ ಮಾಡಿದ್ದೇವೆ. ಉತ್ತರ ಬಂದಿದೆ; ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.—ಉತ್ತರ ಬಂದಿದ್ದರೆ ಬೇರೆ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಎಸ್. ಆರ್ ಬೊಮ್ಮಾಯಿ.—ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಸೋಮವಾರ ಉತ್ತರ ಕೊಡಲಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಯಚೂರು ಥರ್ಮಲ್ ಸ್ಟೇಷನ್ ಕೆಲಸಗಾರರ ಮುಷ್ಕರದ ಬಗ್ಗೆ ನಾನೊಂದು ನೋಟೀಸ್ ಕೊಟ್ಟಿದ್ದೆ.

MR. SPEAKER.—I have admitted it.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳು ಇಲ್ಲೇ ಇದ್ದರು; ಎಲ್ಲಿ ಹಾರಿಹೋದರು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ತಿತಿಮತಿ ಅರಣ್ಯಪ್ರದೇಶದಲ್ಲಿ ಆನೆಗಳ ಕೊಲೆಯಾಗಿದೆ ಮತ್ತು ಅರಣ್ಯ ರಕ್ಷಕರ ಕೊಲೆಯಾಗಿದೆ. ನಾನು ಇದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಯಚೂರಿನಲ್ಲಿ ಕೆಲಸಗಾರರು ಮುಷ್ಕರ ಮಾಡುತ್ತಿದ್ದಾರೆ.

MR. SPEAKER.—It is ready. To-day, I will see that it is done. ಈಗ ಆನೆಗಳ ಕೊಲೆ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಚಿಕ್ಕೇಗೌಡರು ನೋಟೀಸ್ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಚಿಕ್ಕೇಗೌಡರು ಮಾತನಾಡಿ.

ವಿಷಯ: ತಿತಿಮತಿಯಲ್ಲಿ ಆನೆಗಳ ಕೊಲೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ),—ಮಾನ್ಯ ಅಧ್ಯಕ್ಷರೇ, ದಿನಾಂಕ 28–8–1983 ರಂದು ತಿತಿಮತಿ ಅರಣ್ಯಪ್ರದೇಶದಲ್ಲಿ ಆನೆಗಳನ್ನು ಕೊಂದಿದ್ದಾರೆ, ಜೊತೆಗೆ ಅರಣ್ಯ ರಕ್ಷಕರನ್ನೂ ಕೊಂದಿದ್ದಾರೆ. ದಿನಾಂಕ 26–8–1983 ರಂದು ಸಲಗವನ್ನು ಕೊಂದು ಅರಣ್ಯ ರಕ್ಷಕರನ್ನು ಕೊಂದಿದ್ದಾರೆಂದು ಪ್ರಜಾವಾಣಿ ಪತ್ರಿಕೆಯಲ್ಲಿ ಸತತವಾಗಿ ಎರಡು ದಿವಸಗಳು ಪ್ರಕಟವಾಗಿದೆ. ಆನೆಗಳನ್ನು ಕೊಲ್ಲುತಕ್ಕ ಹಂತಕರ ಹಿಂದೆ ಪ್ರಭಾವಶಾಲಿಗಳ ಕೈವಾಡವಿದೆ. ಕಳೆದ ಐದಾರು ತಿಂಗಳುಗಳಿಂದ ಎಷ್ಟು ಸಲಗಗಳನ್ನು ಕೊಂದಿದ್ದಾರೆ ಎನ್ನುವ ಮಾಹಿತಿ ಸರ್ಕಾರದಲ್ಲಿರಬೇಕೆಂದು ಕಾಣುತ್ತದೆ. 100–150 ವರ್ಷ ಕಾಲ ಆನೆ ಬದುಕುತ್ತದೆ. ಅಂತಹ ಸಲಗಗಳ ದಂತ ಲಕ್ಷಾಂತರ ರೂಪಾಯಿ ಬೆಲೆ ಬಾಳುತ್ತದೆ. ಲಕ್ಷಾಂತರ ರೂಪಾಯಿ ದಂತವನ್ನು ಕದಿಯಲು ಆನೆಗಳನ್ನು ಕೊಲೆಮಾಡಲಾಗುತ್ತಿದೆ. ಇದರಲ್ಲಿ ರಾಜಕೀಯ ಪ್ರಭಾವಶಾಲಿಗಳ ಕೈವಾಡವಿರುವುದು ಕಂಡು ಬರುತ್ತದೆ. ಇದರ ಬಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಸಹ ವರದಿಯಾಗಿದೆ. ನನಗೆ ಗೊತ್ತಿರುವ ಪರ್ತಮಾನವ ಪ್ರಕಾರ ಏರಡು-ಮೂರು ಜನ ಅರಣ್ಯ ರಕ್ಷಕರನ್ನು ಕೊಲೆ ಮಾಡಲಾಗಿದೆ. ಆನೆಗಳನ್ನು ಕೊಲ್ಲುತಕ್ಕವರ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳದಿದ್ದರೆ ಬಹುಶಃ ಆನೆಗಳ ವಂಶವೇ ಸರ್ವನಾಶವಾಗುತ್ತದೆ ಎನ್ನುವ ಭಾವನೆ ಉಂಟಾಗಿದೆ. ಆನೆಗಳನ್ನು ಕೊಂದವರು ಇನ್ನೂ ಕಾಡಿನೊಳಗೇ ಇದ್ದಾರೆಂದು ಕಾಡನ್ನು ಸಶಸ್ತ್ರ ಪೋಲೀಸ್ ಆವರಿಸಿದ್ದಾರೆ. ಅರಣ್ಯ ಸಿಬ್ಬಂದಿ ಸಹ ಇದೆ. ಜೊತೆಗೆ ಮೈಸೂರು ಜಿಲ್ಲೆಯಿಂದ ಸಶಸ್ತ್ರ ಪೋಲೀಸ್ ಕರೆಸಿಕೊಳ್ಳಲಾಗಿದೆ. ಅವರನ್ನು ಈಗ ಹಿಡಿದಿದ್ದಾರೋ ಏನೋ ಗೊತ್ತಿಲ್ಲ. ಅವರು ಈಗಾಗಲೇ ತಪ್ಪಿಸಿಕೊಂಡಿರುತ್ತಾರೆ. ಏಳೆಂಟು ದಿವಸ ಕಾಡಿನಲ್ಲಿ ಇರುವುದಕ್ಕೆ ಆಗುವುದಿಲ್ಲ, ಕಾಡಿನಲ್ಲಿ ಆಹಾರ ಎಲ್ಲಿ ಸಿಗುತ್ತದೆ? ಅಲ್ಲಿರತಕ್ಕವರೇ ಸೇರಿಕೊಂಡು ಆನೆಗಳನ್ನು ಕೊಲ್ಲುತಕ್ಕದ್ದು ಸತತವಾಗಿ ನಡೆದಿದೆ. ಇದು ಅನೇಕ ವರ್ಷಗಳಿಂದಲೂ ನಡೆದಿದೆ; ಆದರೆ ಇಷ್ಟೊಂದು ವ್ಯಾಪಕವಾದ ರೀತಿಯಲ್ಲಿ ನಡೆದಿಲ್ಲ; ನಾನು ಇದರಲ್ಲಿ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಅರಣ್ಯ ಸಂರಕ್ಷಕರಿಗೆ ರಕ್ಷಣೆ ಇಲ್ಲವಾಗಿದೆ. ಪಾಪ ನಿರ್ಗತಿಕರಾದ ಏರಡು-ಮೂರು ಅರಣ್ಯ ಸಂರಕ್ಷಕರ ಕೊಲೆಯಾಗಿದೆ. ಎಷ್ಟು ಜನ ಅರಣ್ಯ ಸುಂರಕ್ಷಕರ ಕೊಲೆಯಾಗಿದೆ

ಎಂಬುದು ವರದಿಯಾಗಿಲ್ಲ; ಸರ್ಕಾರಕ್ಕೂ ವರದಿ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಆನೆಗಳ ವಂಶ ನಿರ್ನಾಮವಾಗುತ್ತಿದೆ, ಕಾಡಿನಲ್ಲಿರತಕ್ಕ ನೈಸರ್ಗಿಕ ಸಂಪತ್ತು ಆನೆಗಳು. ಇದು ಹೇಗಾಯಿತು ಎನ್ನುವುದರ ಬಗ್ಗೆ ಹೇಳಿಕೆ ಕೊಡಲು ನಮ್ಮ ಮುಂದೆ ಕಾಡು ಮಂತ್ರಿಗಳು ಇಲ್ಲ. ಕಾಡು ಮಂತ್ರಿಗಳು ಅಧಿಕಾರ ವಹಿಸಿ ಕೊಂಡ ಮೇಲೆ ಕಾಡಾನೆಗಳು ಕೊಲೆಯಾಗತಕ್ಕದ್ದು ಜಾಸ್ತಿಯಾಗಿದೆ.

ಅಧ್ಯಕ್ಷರು.—ಕಾಡು ಮಂತ್ರಿಗಳೋ ಅರಣ್ಯ ಮಂತ್ರಿಗಳೋ ಯಾವುದಾದರೂ ಒಂದು ಹೇಳಿ.

ಶ್ರೀ ಎನ್. ಚಿಕ್ಕೇಗೌಡ.—ಎರಡೂ ಒಂದೇ ಸ್ವಾಮಿ. ಕಾಡು ಮಂತ್ರಿಗಳು ಕೊಡುಗು ಜಿಲ್ಲೆಯವರೇ ಆದುದರಿಂದ ಇದನ್ನು ಲಘುವಾಗಿ ತೆಗೆದುಕೊಳ್ಳದೇ ಬಿಗಿ ಕ್ರಮ ತೆಗೆದುಕೊಂಡು ಆಡಳಿತ ನಡೆಸಬೇಕೆಂದು ಹೇಳುತ್ತೇನೆ. ಈ ರೀತಿ ಆನೆಗಳು ಕೊಲೆಯಾಗುವುದನ್ನು ನೋಡಿ ನನಗೆ ಬಹಳ ವ್ಯಥೆಯಾಗುತ್ತಿದೆ. ಮಾನ್ಯ ಮಂತ್ರಿಗಳು ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಸ್ವಾಮಿ, ಈ ಕಾಡಾನೆಗಳನ್ನು ಕೊಲ್ಲುವುದಕ್ಕೆ ಯಾರದೋ ಕೈವಾಡವಿದೆಯೆಂದು ತಿಳಿದುಬಂದಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಮಗೆ ತಿಳಿದಿರುವ ಪ್ರಕಾರ ಒಂದು ಕಾಡಾನೆ ಸುಮಾರು 120–150 ವರ್ಷಗಳ ತನಕ ಬದುಕಿರುತ್ತದೆ. ಆದರೆ ಇಷ್ಟು ದಿಢೀರನೆ ಸಾಯಬೇಕಾದರೆ ಇದರ ಹಿಂದೆ ಯಾರದೋ ಕೈವಾಡಲಿದೆಯೆಂದು ನನಗೆ ಬಂದಿರುವ ವರದಿಯ ಪ್ರಕಾರ ನಾನು ಹೇಳುತ್ತಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ನನಗೆ ಸಮರ್ಪಕವಾದಂಥ ಉತ್ತರವನ್ನು ಕೊಡುತ್ತಾರೆಂದು ನಾನು ನಂಬಿರುತ್ತೇನೆ.

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಈ ನೋಟೀಸ್‌ನಲ್ಲಿ ಸಹಿ ಮಾಡಿದ್ದೇನೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆ ತಮ್ಮದೇ ಇದೆ. ಆದ್ದರಿಂದ ತಾವು ಆಗ ಮಾತನಾಡಬಹುದು.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನನಗೆ ಬಂದಿರುವ ವರದಿಯ ಪ್ರಕಾರ ಇದುವರೆಗೂ ಸುಮಾರು 50 ಕಾಡಾನೆಗಳನ್ನು ಸಾಯಿಸಿದ್ದಾರೆಂದು ತಿಳಿದುಬಂದಿದೆ. ಈ ಕಾಡಾನೆಗಳು ಸಾಮಾನ್ಯವಾಗಿ ನಾಗರಹೊಳೆ ಮತ್ತು ಬಂಡೀಪುರದಲ್ಲಿ ಹೆಚ್ಚಾಗಿ ಇವೆ. ಈ ಎರಡೂ ಕ್ಷೇತ್ರಗಳು ಪ್ರೇಕ್ಷಕರಿಗೆ ಆನಂದವನ್ನುಂಟು ಮಾಡುವಂಥ ಸ್ಥಳಗಳು. ಆದರೆ ಇಂಥ ಸ್ಥಳದಲ್ಲಿರುವಂಥ ಕಾಡಾನೆಗಳನ್ನು ಸಾಯಿಸುತ್ತಿದ್ದಾರೆಂದರೆ ಹೇಗೆ? ಸ್ವಾಮಿ, ಇವತ್ತು ಒಂದು ಕಾಡಾನೆಯ ಬೆಲೆ ಸುಮಾರು 5 ಲಕ್ಷ ರೂಪಾಯಿಗಳಿಂದ ಹಿಡಿದು ಸುಮಾರು 10 ಲಕ್ಷ ರೂಪಾಯಿಗಳವರೆಗೆ. ಆದರ ದಂತದಲ್ಲಿ ನಾನಾ ರೀತಿಯ ವಸ್ತುಗಳನ್ನು ತಯಾರು ಮಾಡುತ್ತಾರೆ. ಆದರೆ ಈ ಕಾಡಾನೆಗಳನ್ನು ಯಾರು ಕೊಂದಿದ್ದಾರೆ, ಅವರನ್ನು ಮಾನ್ಯ ಅರಣ್ಯ ಮಂತ್ರಿಗಳು ಸಂಬಂಧಪಟ್ಟ ಪೋಲೀಸ್‌ನವರಿಗೆ ಫೋನ್ ಮಾಡಿ ಬಡುಗಡೆ ಮಾಡುವಂತೆ ತಿಳಿಸಿದ್ದಾರೆ. ಇದು ಒಬ್ಬ ಮಂತ್ರಿಯು ಮಾಡುವಂಥ ಕೆಲಸವೇ? ಇವತ್ತು ಸಾಮಾನ್ಯವಾಗಿ ಕಾಡಾನೆಗಳು ಹೆಚ್ಚಾಗಿ ಮಡಿಕೇರಿ ಮತ್ತು ಸೋಮವಾರ ಪೇಟೆ ಹಾಗೂ ವೀರಾಜಪೇಟೆಯಲ್ಲಿ ಹೆಚ್ಚು ಇವೆ. ಅಲ್ಲೆಯೇ ಆನೆಗಳ ಕೊಲೆಯಾಗುತ್ತಿದೆ. ಇದು ಒಂದು ರೀತಿಯಲ್ಲಿ ಅತಿಕ್ರಮವಲ್ಲವೇ? ಇದಕ್ಕೆ ಮಾನ್ಯ ಅರಣ್ಯ ಮಂತ್ರಿಗಳೇ ಉತ್ತರ ಹೇಳಿದರೆ ಸರಿಯಾಗುತ್ತಿತ್ತು ಎಂದು ನಾನು ಹೇಳಬಯಸುತ್ತೇನೆ. ಕಾರಣವೇನೆಂದರೆ ಅವರ ಮೇಲೆ ನಾನು ನೇರವಾದಂಥ ಆಪಾದನೆಯನ್ನು ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಸಹಿ ಮಾಡಿದ್ದೇನೆ...

ಅಧ್ಯಕ್ಷರು.—ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ಈ ವಿಚಾರದಲ್ಲಿ ತಾವು ಮಾತನಾಡಲು ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಆ ಇಲಾಖೆಯ ಮಂತ್ರಿಗಳು ಬಂದಾಗ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದರೆ ಅದರಿಂದ ತಮಗೆ ಸರಿಯಾದ ಉತ್ತರ ಸಿಗಬಹುದು. ಮತ್ತು ಆಗ ತಾವು ಪ್ರಸ್ತಾಪ ಮಾಡಿದ ವಿಶಯ ಪ್ರಯೋಜನವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಚಿಕ್ಕೇಗೌಡರು ಮಾತನಾಡುವಾಗ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡದೆ ಬಿಟ್ಟಿದ್ದಾರೆ. ಆದ್ದರಿಂದ ನಾನು ಈಗ ಮಾತನಾಡಬೇಕಾಗಿದೆ. ಈ ಇಲಾಖೆಯಲ್ಲಿ ಕೆಲವು ಜನ ಡಿ.ಎಫ್.ಓ.ಗಳ ವರ್ಗಾವಣೆಯಾಗಿದೆ. ಅದರ ಬಗ್ಗೆ ಕೂಡ ನಾನು ಪ್ರಸ್ತಾಪಮಾಡಬೇಕಾಗಿದೆ...

ಶ್ರೀ ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೊಡಗಿನ ಆನೆಗಳ ಮೇಲೆ ಕಣ್ಣು ಹಾಕಿದ್ದಾರೆ. ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈಗ ಕೊಡಗಿನಲ್ಲಿ ಬೇರೆ ಸೊಂಡಿಲು ಇರತಕ್ಕಂಥ ಆನೆಗಳು ಬಂದು ಸೇರಿಕೊಂಡಿವೆ. ಈ ಸೊಂಡಿಲ ಆನೆಗಳ ಹಾವಳಿ ಜಾಸ್ತಿಯಾಗಿದೆ.

ಶ್ರೀ ಎಂ. ರಘುಪತಿ.—ಸ್ವಾಮಿ, ಹಿಂದಿನ ಆನೆಯ ಸೊಂಡಿಲು ಈಗಿಲ್ಲ.

ಶ್ರೀ ಎಂ. ವೀರಪ ಮೊಯ್ಲಿ.—ಸ್ವಾಮಿ, ಹಿಂದಿನ ಆನೆಗಳ ಸೊಂಡಿಲಿಗೆ ಈಗ ಹೊಸ ಆನೆಯ ಸೊಂಡಿಲು ಸೇರಿಕೊಂಡು ಅಲ್ಲಿ ಆನೆಗಳಿಗೆ ಹಾವಳಿ ಜಾಸ್ತಿಯಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಇದುವರೆಗೂ ಅನೇಕ ಜನ ಮಾನ್ಯ ಸದಸ್ಯರು ಕೊಡಗಿನ ಆನೆಗಳ ಸಾವಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಕೂಡ ಬಂದಿದೆ. ಇದು ಬಹಳ ಉತ್ತಮವಾದಂಥ ವಿಚಾರ. ಜೊತೆಗೆ ಇದರಲ್ಲಿ ಗಂಭೀರತೆ ಕೂಡ ಇದೆ. ಆದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳು ಸೋಮವಾರ ಅಥವಾ ಮಂಗಳವಾರ ಒಂದು ಹೇಳಿಕೆಯನ್ನು ಮಾಡುತ್ತಾರೆ. ಆಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುವುದಕ್ಕೆ ಅನುಕೂಲವಾಗಬಹುದೆಂದು ನನ್ನ ಭಾವನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದು ಏನೆಂದರೆ ಸ್ಟೇಟ್ ವಿಜಿಲೆನ್ಸ್ ಮತ್ತು ಬಿಡಿಎ ಬಗ್ಗೆ. ತಾವು ನಾಳೆ ತೆಗೆದುಕೊಳ್ಳೋಣವೆಂದು ನೆನೆಯ ದಿವಸ ಹೇಳಿದ್ದೀರಿ. ಆದ್ದರಿಂದ ದಯವಿಟ್ಟು ನನಗೆ ಅವಕಾಶ ಮಾಡಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಬಿಡಿಎ ಟ್ರಾನ್ಸ್‌ಫರ್ ಬಗ್ಗೆ ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಅದು ಅಲ್ಲ, ಬೇರೆ ಕಳುಹಿಸಿಕೊಟ್ಟಿದ್ದೇನೆ. ನೆನ್ನೆಯ ದಿವಸ ಮಾನ್ಯ ಉಪಾಧ್ಯಕ್ಷರು ನಾಳೆ ತೆಗೆದುಕೊಳ್ಳೋಣವೆಂದು ಹೇಳಿದ್ದರು.

ಅಧ್ಯಕ್ಷರು.—ನನಗೆ ಬಿಡಿಎ ಟ್ರಾನ್ಸ್‌ಫರ್ ಬಗ್ಗೆ ನೋಟೀಸ್ ಕೊಟ್ಟಿದ್ದೀರಿ. ಅದನ್ನು ನಾನು 311 ರ ಪ್ರಕಾರ ಡಿಸ್‌ಅಲೋ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಅದನ್ನು ಪ್ರಸ್ತಾಪ ಮಾಡುತ್ತಿಲ್ಲ; ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ನೋಟೀಸ್ ಕಾಪಿ ಇದ್ದರೆ ಕೊಡಿ; ನಿಮ್ಮ ಹತ್ತಿರ ನೋಟೀಸ್ ಕಾಪಿ ಇಲ್ಲದೇ ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ನೋ...ನೋ...ಮಾನ್ಯ ಸಭಾಧ್ಯಕ್ಷರಿಗೆ ನೋಟೀಸ್ ಕಳುಹಿಸಿದ್ದೇನೆ. ಪ್ರಸ್ತಾಪವನ್ನು ಆಮೇಲೆ ಮಾಡಬಹುದು ಎಂದು ಹೇಳಿದ್ದಾರೆ; ನಿನ್ನೆ ಉಪಾಧ್ಯಕ್ಷರೂ ಸಹ ಹೇಳಿದ್ದಾರೆ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಬಹಳ ಪ್ರಾಮುಖ್ಯವಾದ ವಿಚಾರ. ನಾನು ಮತ್ತು ಧರ್ಮಸಿಂಗ್ ಇಬ್ಬರೂ ಒಂದು ನೋಟೀಸ್ ಕೊಟ್ಟಿದ್ದೇವೆ. ಈಗ ಸೀಮೆಎಣ್ಣೆ ಪೂರೈಕೆ ನಿಲ್ಲಿಸಿಬಿಟ್ಟಿದ್ದಾರೆ.

ಅಧ್ಯಕ್ಷರು.—ಅದನ್ನು ಕೇಳಿದಾಗ ನೀವು ಏನೂ ಹೇಳಿಲ್ಲ.

ಶ್ರೀ ವೀರಪ್ಪ ಮೊಯ್ಲಿ.—ನೀವು ಕೇಳಿದಾಗ ನಮಗೆ ಗೊತ್ತಾಗಲಿಲ್ಲ. ರೇಷನ್‌ಷಾಪ್‌ನಲ್ಲಿ ಅಕ್ಕಿ ಪೂರೈಕೆಯನ್ನು ನಿಲ್ಲಿಸಿಬಿಟ್ಟಿದ್ದಾರೆ.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರಿಗೆ ಎರಡು ಸಾರಿ ಕೇಳಿದೆ; ಅದು ನನ್ನ ಪಟ್ಟಿಯಲ್ಲಿ ಇದೆ. ನಾಳೆ ತೆಗೆದುಕೊಳ್ಳೋಣ.

ಶ್ರೀ ವಿ. ಎಸ್. ಆಚಾರ್.—ನಾನು ರೂಲ್ 334 ರೆ ಕೆಳಗೆ ಒಂದು ಪ್ರಶ್ನೆ ಕಳುಹಿಸಿದ್ದೇನೆ.

ಶ್ರೀ ಪಿ. ರಾಮ್‌ದೇವ್.—ಕಳೆದ ವಾರ 334 ರ ವ್ಯಾಪ್ತಿಯಲ್ಲಿ ಬರುವ ವಿಚಾರಗಳ ಬಗ್ಗೆ ಒಂದು ನೋಟೀಸ್ ಕಳುಹಿಸಿದ್ದೇನೆ. ಅದು ಎಷ್ಟು ತುರ್ತು ಆಗಿದೆ ಎಂದರೆ ಅದರ ವಿಚಾರ ತಾವು ಓದಿದರೆ ತಿಳಿಯುತ್ತದೆ. ಇವೊತ್ತು ದನದ ಕೊಬ್ಬನ್ನು ವನಸ್ಪತಿಯಲ್ಲಿ ಸೇರಿಸಿ ಇಡೀ ರಾಷ್ಟ್ರಾದ್ಯಂತ ಮಾರಾಟ ಮಾಡುತ್ತಿದ್ದಾರೆ. ಅದರ ಬಗ್ಗೆ ಅಂದರೆ ಈ ವಿಚಾರ ಕೇಂದ್ರದ ಪಾರ್ಲಿಮೆಂಟ್‌ನಲ್ಲಿ ಬಂದಿದ್ದು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಕೆಲವರನ್ನು ಬಂಧಿಸಿದ್ದಾರೆ; ಮತ್ತು ವಿಚಾರಣೆ ಮಾಡುವುದಕ್ಕೆ ಆಜ್ಞೆ ಮಾಡಿದ್ದಾರೆ. ನಾವೆಲ್ಲಾ ಇದನ್ನು ಇವತ್ತು ತಿನ್ನುತ್ತಿದ್ದೇವೆ. ಈ ಕಲಬೆರಕೆ ದನದ ಕೊಬ್ಬನ್ನು ತಿನ್ನತಕ್ಕಂಥದ್ದು ನಮ್ಮ ಸೆಂಟಿಮೆಂಟಲ್‌ಗೆ ವಿರುದ್ಧವಾಗಿದೆ.

ಅಧ್ಯಕ್ಷರು.—ರಾಮ್‌ದೇವ್‌ರವರೆ, ತಮ್ಮ ನೋಟೀಸನ್ನು ನಾನು ಸಂಬಂಧಪಟ್ಟ ಮಂತ್ರಿಯವರಿಗೆ ಕಳುಹಿಸಿದ್ದೇನೆ. ಅಲ್ಲಿಂದ ಏನಾದರೂ ಉತ್ತರ ಬರುತ್ತದೆಯೋ ಎಂದು ಕಾಯೋಣ; ಸ್ವಲ್ಪ ತಡೆಯಿರಿ; ಅದನ್ನು ಒಂದೆರಡು ದಿನಗಳಲ್ಲಿ ಅಥವಾ ಸೋಮವಾರ ತೆಗೆದುಕೊಳ್ಳೋಣ.

ಶ್ರೀ ವಿ. ಎಸ್. ಆಚಾರ್.—ಈಗ ಮೊನ್ನೆ ದಿವಸ ರೂಲ್ 334ರ ಕೆಳಗೆ ನಾನು ಒಂದು ಶಿಕ್ಷಣದ ನೀತಿಯ ಮತ್ತು ಧರ್ಮದ ಬಗ್ಗೆ ಒಂದು ನೋಟೀಸ್ ಕಳುಹಿಸಿದ್ದೆ; ಅದನ್ನು ಹಿಂದೆಯೂ ಎತ್ತಿದ್ದೇನೆ; ಈಗ ಪುನಃ ಅದನ್ನು ಎತ್ತುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇವರು ಎತ್ತಿದಂಥ ವಿಚಾರಗಳನ್ನು ಆಮೇಲೆ ಮಾಡೋಣ. ಮಾನ್ಯ ಮಂತ್ರಿಯವರು ಬಂದಾಗ ಪ್ರಸ್ತಾಪ ಮಾಡೋಣ. ಏಕೆಂದರೆ ಮಂತ್ರಿಗಳು ಆ ಸದನದಲ್ಲಿ ಇದ್ದಾರೆ.

ಶ್ರೀ ಬಿ. ಆರ್. ಪಾಟೀಲ್.—ನಮ್ಮ ಗುಲ್ಬರ್ಗದಲ್ಲಿ ರಸಗೊಬ್ಬರದಲ್ಲಿ ಕಲಬೆರಕೆ ನಡೆಯುತ್ತಿದೆ. ಅದರ ಬಗ್ಗೆ ಒಂದು ನೋಟೀಸ್‌ನ್ನು ನಾನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಸರ್ಕಾರದ ರಿಪೋರ್ಟ್ ಬರಬೇಡವೇ? ಸ್ವಲ್ಪ ತಡೆಯಿರಿ.

ಶ್ರೀ ಶಾನಪ್ಪ.—ನಾನೂ ಸಹ 334 ರ ಪ್ರಕಾರ ನೋಟೀಸ್ ಕೊಟ್ಟು 10 ದಿವಸವಾಯಿತು.

ಅಧ್ಯಕ್ಷರು.—ಶಹಾಬಾದ್‌ನಲ್ಲಿ ಒಂದು ಹುಡುಗಿಯನ್ನು ರೇಪ್ ಮಾಡಿದ ವಿಚಾರ ತಾನೇ ? ಅದರ ಬಗ್ಗೆ ರಿಪೋರ್ಟ್ ಕಾಲ್‌ಫಾರ್ ಮಾಡಿದ್ದೇವೆ.

ಗಮನ ಸೆಳೆಯುವ ಸೂಚನೆ

ವಿಷಯ : ನಂಜನಗೂಡಿನ ಸುಜಾತ ಟೆಕ್ಸ್‌ಟೈಲ್ಸ್ ಮಿಲ್ಲಿನ ಕಲುಷಿತ ನೀರಿನಿಂದ ಕಬಿನಿ ನದಿಯ ನೀರು ಮಲಿನಗೊಳ್ಳುವ ಬಗ್ಗೆ.

ಶ್ರೀ ಎಂ. ಮಹದೇವ್.—ಸ್ವಾಮಿ, "ಸುಜಾತ ಟೆಕ್ಸ್‌ಟೈಲ್ಸ್ ಮಿಲ್ಸ್," ನಂಜನಗೂಡಿನಿಂದ ಹೊರ ಬಿಡುವ ಕಲುಷಿತ ನೀರಿನಿಂದ ಕಬಿನಿ ನದಿಯ ನೀರು ಮಲಿನಗೊಳ್ಳುವ ಬಗ್ಗೆ ನಾನು ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು) (ಮುಖ್ಯಮಂತ್ರಿಗಳ ಪರವಾಗಿ).—ನಂಜನಗೂಡಿನ ಬಳಿ ಇರುವ ಸುಜಾತ ಟೆಕ್ಸ್‌ಟೈಲ್ಸ್ ಕಾರ್ಖಾನೆಯಲ್ಲಿ ಹತ್ತಿಯ ನೂಲು ಮತ್ತು ಮರ್‌ಸರೈಸ್ಡ್ ಮಾಡಿದ ಹತ್ತಿಯ ದಾರವನ್ನು ತಯಾರಿಸುತ್ತಿದೆ. ಈ ಕ್ರಯೆಯಲ್ಲಿ ಸುಮಾರು ಒಂದು ಲಕ್ಷ ಲೀಟರ್ ಕಲುಷಿತ ನೀರು ಉತ್ಪತ್ತಿಯಾಗುತ್ತದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯ ಆದೇಶ ದಂತೆ ಸದರಿ ಕಾರ್ಖಾನೆಯು ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟವನ್ನು ಹೊಂದಲು ಬೇಕಾದ ಕಲುಷಿತ ನೀರನ್ನು ಶುದ್ಧೀಕರಿಸಲು ಸಂಸ್ಕರಣ ಘಟಕಗಳನ್ನು ಅಳವಡಿಸಿದೆ. ಈ ರೀತಿಯಾಗಿ ಶುದ್ಧೀಕರಿಸಿದ ನೀರು ನದಿಗೆ ಹೋಗುತ್ತದೆ. ಶುದ್ಧೀಕರಿಸಿದ ನೀರಿನ ಗುಣಮಟ್ಟವನ್ನು ಮಂಡಲಿಯು ಪರಿಶೀಲಿಸುತ್ತಿದೆ.

ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟವನ್ನು ಹೊಂದಿರುವ ಶುಚೀಕರಿಸಿದ ನೀರನ್ನು ತನಗಿರುವ ಜಾಗದಲ್ಲಿ ಗಿಡಮರಗಳನ್ನು ಬೆಳೆಯಲು ಮತ್ತು ತೋಟಕ್ಕೆ ಉಪಯೋಗಿಸಲು ಸದರಿ ಕಾರ್ಖಾನೆಗೆ ಆದೇಶ ನೀಡಲಾಗಿದೆ. ಹೀಗೆ ಮಾಡಿದ್ದಲ್ಲಿ ಶುದ್ಧೀಕರಿಸಿದ ನೀರು ನೇರವಾಗಿ ನದಿಯನ್ನು ಸೇರದಂತೆ ನೋಡಿ ಕೊಳ್ಳಬಹುದು. ಈಗಾಗಲೇ ಸದರಿ ಕಾರ್ಖಾನೆಯು ಶುದ್ಧೀಕರಿಸಿದ ನೀರಿನ ಸ್ವಲ್ಪ ಪ್ರಮಾಣವನ್ನು ತೋಟಕ್ಕೆ ಉಪಯೋಗಿಸುತ್ತಿದ್ದು ಮಿಕ್ಕ ಎಲ್ಲಾ ನೀರನ್ನು ಹೀಗೆಯೇ ಉಪಯೋಗಿಸಲು ಯೋಜನೆಯನ್ನು ಹೊಂದಿದೆ. ಹೀಗೆ ಇದ್ದಾಗ್ಯೂ ವಿದ್ಯುತ್ ಕಡಿತದಿಂದ ಕೆಲ ಸಮಯದಲ್ಲಿ ಸದರಿ ಕಾರ್ಖಾನೆಯು ಶುದ್ಧೀಕರಿಸಿದ, ಭಾಗಶಃ ಶುದ್ಧೀಕರಿಸಿದ ನೀರನ್ನು ನದಿಗೆ ಬಿಟ್ಟಿರುವುದು ಗಮನಕ್ಕೆ ಬಂದಿದೆ. ತಕ್ಷಣ ಸದರಿ ಕಾರ್ಖಾನೆಗೆ ಕಲುಷಿತ ನೀರನ್ನು ಮಂಡಲಿಯು ನಿಗದಿ ಪಡಿಸಿರುವ ಗುಣಮಟ್ಟಕ್ಕೆ ಶುದ್ಧೀಕರಿಸಿ ಬಿಡಲು ಮತ್ತು ಸಂಸ್ಕರಣ ಘಟಕಗಳನ್ನು ನಡೆಸಲು ಬೇಕಾದ ವಿದ್ಯುಚ್ಛಕ್ತಿಯ ಬದಲು ಏರ್ಪಾಡನ್ನು ಮಾಡಲು ಸೂಕ್ತ ತಿಳುವಳಿಕೆ ನೀಡಲಾಗಿದೆ.

ಈ ಕಾರ್ಖಾನೆಯಲ್ಲದೆ ನಂಜನಗೂಡಿನ ಸುತ್ತಮುತ್ತಲೂ ಇನ್ನೂ 7 ಕಾರ್ಖಾನೆಗಳು ಇದ್ದು ಭಾಗಶಃ ಅವುಗಳೆಲ್ಲಾ ಸಂಸ್ಕರಣ ಘಟಕಗಳನ್ನು ಹೊಂದಿವೆ. ಈ ಕಾರ್ಖಾನೆಗಳಿಗೆ ಕೂಡ ತಮ್ಮಿಂದ ಉತ್ಪನ್ನವಾಗುವ ಕಲುಷಿತ ನೀರನ್ನು ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟಕ್ಕೆ ಸಂಸ್ಕರಿಸಿ ಶುದ್ಧೀಕರಿಸಿದ ನೀರನ್ನು ನೇರವಾಗಿ ನದಿಗೆ ಬಿಡದೆ ತಮಗಿರುವ ಜಾಗದಲ್ಲಿ ತೋಟಗಾರಿಕೆಗೆ ಅಥವಾ ವ್ಯವಸಾಯಕ್ಕೆ ಉಪಯೋಗಿಸುವಂತೆ ಸೂಕ್ತ ಆದೇಶವನ್ನು ನೀಡಲಾಗಿದೆ. ಇದಲ್ಲದೆ ಕಾರ್ಖಾನೆಗಳ ವತಿಯಿಂದ ಆಗುವ ಮಾಲಿನ್ಯದ ಹೊರತಾಗಿ ನಂಜನ ಗೂಡಿನ ಗೃಹ ಬಳಕೆಯಿಂದ ಬರುವ ಕಲುಷಿತ ನೀರು ನದಿಗೆ ಸೇರುತ್ತಿದೆ. ಸದರಿ ಮುನಿಸಿಪಾಲಿಟಿಗೆ ಕೊಳಚೆ ನೀರನ್ನು ಮಂಡಲಿಯು ನಿಗದಿಪಡಿಸಿದ ಗುಣಮಟ್ಟಕ್ಕೆ ಶುದ್ಧೀಕರಿಸಲು ಬೇಕಾಗುವ ಶುದ್ಧೀಕರಣದ ಘಟಕ ಗಳನ್ನು ಹಾಕಲು ಆದೇಶ ನೀಡಲಾಗಿದೆ.

ಕಬಿನಿ ನದಿಯಿಂದ ನಂಜನಗೂಡಿಗೆ ನೀರನ್ನು ಸರಬರಾಜು ಮಾಡುವ ಜಾಗದಿಂದ ನದಿಯ ಮೇಲ್ಭಾಗ ದಲ್ಲಿ ಅಂದರೆ ರೈಲ್ವೆ ಸೇತುವೆಯ ಬಳಿ ಮತ್ತು ದೇವಸ್ಥಾನದ ಬಳಿ ಇರುವ ಸ್ನಾನದ ಘಟ್ಟದ ಬಳಿ ಹರಿಯುವ ಕಬಿನಿ ನದಿಯ ನೀರಿನ ಗುಣಮಟ್ಟವನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ಏಪ್ರಿಲ್ 1982 ರಿಂದ ಪ್ರತಿ ತಿಂಗಳೂ ಪರೀಕ್ಷಿಸುತ್ತಿದ್ದು, ಪರೀಕ್ಷೆಯ ಆಧಾರದ ಮೇಲೆ ನಂಜನಗೂಡು ಪ್ರಾಂತ್ಯದಲ್ಲಿ ಹರಿಯುವ ನದಿಯ ನೀರು ಸ್ನಾನಕ್ಕೂ ಮತ್ತು ಶುದ್ಧೀಕರಿಸಿದ ಮೇಲೆ ಗೃಹ ಬಳಕೆಗೂ ಯೋಗ್ಯವಾದ ಗುಣಮಟ್ಟವನ್ನು ಹೊಂದಿದೆ ಎಂದು ತಿಳಿಯುತ್ತದೆ. ಶುದ್ಧೀಕರಿಸಿದ ನದಿಯ ನೀರನ್ನು ಗೃಹ ಬಳಕೆಗೆ ಉಪಯೋಗಿಸಬಹುದು.

ಕಬಿನಿ ನದಿಯ ನೀರನ್ನು ಮಾಲಿನ್ಯಗೊಳ್ಳದಂತೆ ತಡೆಯಲು ಈ ಪ್ರಾಂತ್ಯದಲ್ಲಿ ನೆಲೆಸಿರುವ ಎಲ್ಲಾ ಕಾರ್ಖಾನೆಗಳಿಗೂ ಅವರ ಕಲುಷಿತ ನೀರನ್ನು ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟಕ್ಕೆ ಸಂಸ್ಕರಿಸಿ, ತಮ್ಮ ಭೂಮಿಯಲ್ಲೇ ವ್ಯವಸಾಯಕ್ಕೆ ಉಪಯೋಗಿಸಲು ಮತ್ತು ನದಿಗೆ ನೇರವಾಗಿ ಬಿಡದಂತೆ ನೋಡಿ ಕೊಳ್ಳಲು ಆದೇಶ ನೀಡಲಾಗಿದೆ. ಕಬಿನಿ ನದಿಯ ನೀರಿನ ಗುಣಮಟ್ಟವನ್ನು ಸತತವಾಗಿ ಪರೀಕ್ಷಿಸುತ್ತಿದ್ದು, ಕಬಿನಿ ನದಿಯ ನೀರು ಮಾಲಿನ್ಯಗೊಳ್ಳದಂತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎಂ. ಮಹದೇವ್.—ಕಳೆದ ಅಧಿವೇಶನದಲ್ಲೂ ನಾನು ಈ ವಿಚಾರ ಪ್ರಸ್ತಾಪ ಮಾಡಿದ್ದೆ. ಟೌನ್‌ನಲ್ಲಿ ಸುಮಾರು 30 ಸಾವಿರ ಜನರು ಈ ನೀರನ್ನೇ ಕುಡಿಯುತ್ತಿದ್ದಾರೆ. ಇದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಈ ನೀರನ್ನು ತೋಟಗಳಿಗೆ ಉಪಯೋಗಿಸುವಂತೆ ಮಾಡಲು ಅಶ್ವಾಸನೆ ಮೂಲಕ ಸರ್ಕಾರದವರು ಆದೇಶ ಕೊಡುತ್ತಾರೆಂಬ ವಿಶ್ವಾಸವಿಟ್ಟಿದ್ದೆ. ನಾನು ನಿನ್ನೆ ತಾನೇ ಊರಿ